ಮಹಾರಾಣಿ ಗರ್ಭಿಣಿಯಾಗಿದ್ದಾರೆ. ಇನ್ನೇನು ಇಂದು ನಾಳೆ ಪ್ರಸವಿಸಿ ರಾಜ್ಯಕ್ಕೆ ಉತ್ತರಾಧಿಕಾರಿಯನ್ನು ಕೊಡಲಿದ್ದಾರೆ. ಹೀಗಿರುವಾಗ ಯಃಕಶ್ಚಿತ್ ವಿಚಾರಗಳ ಬಗ್ಗೆ ತಾವು ಯೋಚಿಸದೆ ನಿಶ್ಚಿಂತರಾಗಿರಿ' ಎಂದು ಮನವಿ ಮಾಡಿಕೊಂಡರು..

ರಾಜಾರಾಮರು ಅದಕ್ಕೊಪ್ಪದೆ, 'ಎರಡು ವಿಚಾರಗಳು ಸಾಧಕ ಬಾಧಕಗಳನ್ನು ನೋಡೋಣ. ನಾನು ಸೀತೆಯನ್ನು ಪರಿತ್ಯಜಿಸಿದರೆ ಒಬ್ಬನೇ ಸಿಂಹಾಸನವೇರಲು ಸಾಧ್ಯವಿಲ್ಲ. ನನ್ನ ಕಾಲದಲ್ಲಿ ರಾಜ್ಯಾಡಳಿತಗಳು ಸುಸೂತ್ರವಾಗಿ ನಡೆದರೂ ನನ್ನ ನಂತರ ರಾಜ್ಯಕ್ಕೆ ಉತ್ತರಾಧಿಕಾರಿ ಇರುವುದಿಲ್ಲ. ಹೀಗಾಗಿ ನೀವೆಲ್ಲಾ ಸೇರಿ ನನಗೆ ಪುನಃ ಲಗ್ನ ಮಾಡಿಸುತ್ತೀರಿ ಹೌದಲ್ಲವೇ?'

'ಹೌದು ಹೌದು' ಎಲ್ಲರೂ ಹೇಳಿದರು.

'ಸಭಾಸದರೇ! ಇದರಿಂದ ನಾನು 'ಭಲೇ' ಎನ್ನಿಸಿಕೊಳ್ಳಬಹುದು. ಜನರಿಗೆ ಇದರಲ್ಲಿ ಎಳ್ಳಷ್ಟೂ ತಪ್ಪು ಕಾಣಿಸುವುದಿಲ್ಲ. ನಾನು ಪುತ್ರವಂತನಾಗಿ ನೆಮ್ಮದಿಯಿಂದ ನನ್ನ ಮಗನಿಗೆ ಪಟ್ಟಾಭಿಷೇಕ ಮಾಡಿ ವಾನಪ್ರಸ್ಥಕ್ಕೆ ಅಣಿಯಾಗಬಹುದಲ್ಲವೇ?'

'ಹೌದು, ಹೌದು'

'ಹಿಂದೆ ನಾನು ಗುರುಗಳಾದ ವಿಶ್ವಾಮಿತ್ರ ಮಹರ್ಷಿಯವರ ಯಾಗ ಸಂರಕ್ಷಿಸಿದ ಮೇಲೆ ಮಿಥಿಲೆಗೆ ಹೋಗುವಾಗ ದಾರಿಯಲ್ಲಿ ಶಾಪಗ್ರಸ್ತಳಾದ ಅಹಲ್ಯೆಯ ಭೇಟಿಯಾಯಿತು. ಅತಿ ಪ್ರತಿವ್ರತೆ, ಪರಮ ದೈವಭಕ್ತೆ, ಶ್ರದ್ಧಾವಂತ ಗೃಹಸ್ವಾಮಿನಿಯಾದರೂ, ಅಪರಾತ್ರಿಯಲ್ಲಿ ಗೌತಮ ವೇಷದಲ್ಲಿ ಬಂದ ಇಂದ್ರನ ಕುತಂತ್ರಕ್ಕೆ ಬಲಿಯಾಗಿ ಅವನ ವಶವಾದಳು. ವಿಷಯ ಗೊತ್ತಾದ ಗೌತಮರು ಇಂದ್ರನಿಗೆ ಶಾಪವಿತ್ತು ಅಹಲ್ಯೆಯನ್ನು ಪರಿತ್ಯಜಿಸಿದರು. ನಾನಾಗ ಗೌತಮರನ್ನು ಇನ್ನಿಲ್ಲದ ವಿನಯ ವಿಧೇಯತೆಗಳಿಂದ ಮಾಡಿದ ಚರ್ಚೆಯಲ್ಲಿ ಒಡಂಬಡಿಸಿ ಪುನಃ ಪತಿ–ಪತ್ನಿಯರನ್ನು ಒಂದುಗೂಡಿಸಿದೆನಲ್ಲವೇ?

'ಹೌದು ಹೌದು'

'ಅಂತಹ ನಾನು ಅರಿತೋ ಅರಿಯದೋ ಪಾಪ ಕಾರ್ಯಕ್ಕೆ ಬಲಿಯಾದ ಅಹಲ್ಯೆಗೆ ಬಾಳು ಕೊಡಿಸಿ, ಪಾಪವನ್ನೇ ಅರಿಯದ ಪರಿಶುದ್ಧಳಾದ ಸೀತೆಯನ್ನು ಪರಿತ್ಯಜಿಸಿದರೆ ಅದು ಸರಿಯೇ? ಅಷ್ಟೇ ಅಲ್ಲ, ನನ್ನನ್ನೇ ನಂಬಿ ವಿವಾಹವಾದಾಗ ಸರ್ವರ ಸಮ್ಮುಖದಲ್ಲಿ 'ನಾತಿಚರಾಮಿ' ಎಂದು ಹೇಳಿ ಕೈಹಿಡಿದವಳನ್ನು ವನವಾಸದಲ್ಲಿ ನನ್ನ ಕಷ್ಟಗಳಲ್ಲಿ ಭಾಗಿಯಾಗಿ ನನ್ನ ಒಳಿತನ್ನೇ ಬಯಸುವವಳನ್ನು ನನ್ನ ಸೇವೆಗೆ ತನ್ನ ಜೀವವನ್ನೇ ಮೀಸಲಾಗಿಟ್ಟವಳನ್ನು ತ್ಯಜಿಸಿದರೆ ನಾನು ರಾಕ್ಷಸರಿಗಿಂತ ಹೇಗೆ ಕಡಿಮೆಯಾಗುತ್ತೇನೆ? ತಾವೆಲ್ಲಾ ನನಗೆ ಸೀತೆಯ ಮೇಲಿನ ಮೋಹ, ಅದರಿಂದ ಹೀಗೆಲ್ಲಾ ಮಾತಾಡ್ತೀನಿ ಅಂತ ತಿಳಿಯಬೇಡಿ. ನ್ಯಾಯ ಎಲ್ಲರಿಗೂ ಒಂದೇ ಅಲ್ಲವೇ? ಅಹಲ್ಯೆಗೆ ಬೇರೆ, ಸೀತೆಗೆ ಬೇರೆಯೇ?'

'ತಾವೆಲ್ಲಾ ನನಗೆ ಪುನಃ ಇನ್ನೊಂದು ಲಗ್ನ ಮಾಡಬಹುದು, ಅವಳು ಸೀತೆಗಿಂತ ಸುಂದರಿಯಾಗಿರಬಹುದು. ಸೀತೆಗಿಂತ ಸುಂದರಿಯರಾದ ನಾಲ್ಕಾರು ಜನರನ್ನು ನಾನು ವಿವಾಹವಾದರೂ ಯಾರೂ ಏನೂ ಆಕ್ಷೇಪಿಸುವುದಿಲ್ಲ. ಅದು ನನಗೆ ಗೊತ್ತು. ಆದರೆ... ಆದರೆ... ಅವರ್ಯಾರು 'ಸೀತೆ'ಯಾಗಲಾರರು. ನಾನು ಪಿತೃವಾಕ್ಯ ಪರಿಪಾಲಕ, ಸತ್ಯಸಂಧ, ನೀತಿವಂತ ಹೀಗೆಲ್ಲಾ ಅನ್ನುತ್ತಾರೆ ಜನ. ಆದರೀಗ, ನಾನು ನನ್ನನ್ನೇ ನಂಬಿರುವ ಒಂದು ಜೀವವನ್ನು, ಕಳಂಕವಿಲ್ಲದ, ನಿರಪರಾಧಿಯಾದ ಸೀತೆಯನ್ನು ಬಿಟ್ಟರೆ ನಾನು ರಘುವಂಶದ ರಾಮನಾಗಬಲ್ಲೆನೇ? ಹಾಗಾಗಿ ನಾನೀಗ ಯಾವುದೇ ತೀರ್ಮಾನವನ್ನು ಹೇಳುವುದಿಲ್ಲ. ನಾಳೆ ಗೂಢಚಾರರ ವಾರ್ತೆಯನ್ನು ಕೇಳಿದ ಮೇಲೆ ಕೊನೆಯ ತೀರ್ಮಾನ. ಈಗ ನಾನು ಸೀತೆಯ ಅಂತಃಪುರಕ್ಕೆ ಹೋಗುವುದಿಲ್ಲ. ಇಲ್ಲೇ ಮಲಗುತ್ತೇನೆ. ನಾಳೆ ಗೂಢಚಾರರು ಬರುವ ವೇಳೆಗೆ ಪುರಜನರೆಲ್ಲಾ ಇಲ್ಲಿ ಸೇರಲಿ. ಎಲ್ಲರಿಗೂ ಕಾಣುವಂತೆ ಹೊರಗೆ ಒಂದು ಎತ್ತರದ ವೇದಿಕೆ ನಿರ್ಮಾಣವಾಗಲಿ. ಅದರ ಮೇಲೆ ನಿಂತ ನಾನು ಹಾಗೂ ಕುಳಿತ ನೀವುಗಳೆಲ್ಲಾ ಸೇರಿ ತೀರ್ಮಾನ ತೆಗೆದುಕೊಳ್ಳೋಣ. ಬಹುಶಃ ನಾನು ಸೀತೆಯಿಂದ ಇಲ್ಲಿಂದ ನಿರ್ಗಮಿಸುತ್ತೇನೆ. ನೀವೆಲ್ಲಾ ಲಕ್ಷ್ಮಣನಿಗೆ ಪಟ್ಟಕಟ್ಟಿ. ಅವನು ಹಾಗೂ ಭರತ ಶತ್ರುಘ್ನರು ನನಗಿಂತ ಸಮರ್ಥರು. ಚೆನ್ನಾಗಿ ರಾಜ್ಯವಾಳ್ತಾರೆ' ಎಂದು ಹೇಳಿ ಸಭೆ ಬರಖಾಸ್ತಾಯಿತೆಂಬ ಸೂಚನೆ ಕೊಟ್ಟ.

ಮರುದಿನ ಬೆಳಗ್ಗೆ ಸೂರ್ಯೋದಯದ ವೇಳೆಗೆ ಪುರಜನರೆಲ್ಲಾ ಸೇರಿ ಬಿಟ್ಟಿದ್ದಾರೆ. ಸಭಾ ಪ್ರಮುಖರು ಆಗಮಿಸಿ ಆಸೀನರಾಗಿದ್ದಾರೆ. ಒಂದು ಕಡೆ ರಾಮನು ನಿಂತಿದ್ದಾನೆ. ಅಗಸನನ್ನೂ ಅವನ ಹೆಂಡತಿಯನ್ನೂ, ಅವಳ ಮತ್ತು ಅವನ ಅಪ್ಪ ಅಮ್ಮಂದಿರನ್ನೂ ಕರೆ ತಂದಿದ್ದಾರೆ.

ಪುರೋಹಿತರಿಂದ ಸಭೆ ಪ್ರಾರಂಭವಾಯಿತು.

ಮೊದಲ ಅವಕಾಶ ಗೂಢಚಾರನದು. ಅವನು ಮಾತಾಡಬೇಕೀಗ. ಅವನು ಹೇಳತೊಡಗಿದ. 'ಪ್ರಭುಗಳೇ ನಾವೆಲ್ಲಾ ಕೂಲಂಕಷವಾಗಿ ಪರಿಶೋಧಿಸಿದ್ದೇವೆ. ಈ ಹೆಣ್ಣು ಮಗಳು (ಅಗಸನ ಹೆಂಡತಿ) ಬಹಳ ಸನ್ಮಾರ್ಗಿ. ಯೋಗ್ಯೆ, ಸೌಮ್ಯ ಸ್ವಭಾವದವಳು. ಆದರೆ ಈ ಅಗಸ ಭಂಡ, ಕುಡುಕ, ತಲೆ ತಿರುಕ. ಅನೇಕ ವಿಧವಾಗಿ ಅವಳನ್ನು ಕಾಡಿ, ಪೀಡಿಸಿದ್ದಾನೆ. ಅನಾಚಾರಿಯೂ ಹೌದು. ಈ ಹೆಣ್ಣು ಮಗಳು ಮಾರ್ಗ ತಪ್ಪಿದವಳಲ್ಲ... ಈಗ ಅವಳ ಅತ್ತೆ ಮಾವಂದಿರು ಮಾತಾಡಿದರು. ಮಹಾಸ್ವಾಮಿ, ನಮ್ಮ ಸೊಸೆ ಬಂಗಾರದಂಥವಳು. ಮಗ ಕೇಡಿಗ. ತಪ್ಪೆಲ್ಲಾ ಅವನದ್ದೇ...'

ಈಗ ಅವಳ ತಂದೆ ತಾಯಿಯರು... 'ಸ್ವಾಮೀ, ನಮ್ಮ ಅಳಿಯ ಅನಾಚಾರಿ. ತಿಳಿಯದೇ ಮೋಸ ಹೋದೆವು. ಮಾಣಿಕ್ಯದಂಥ ಮಗಳನ್ನು ಇವನ ಕೈಲಿಟ್ಟು ಪಾಪ ಕಟ್ಟಿಕೊಂಡೆವು...' ಅಗಸ ಮಾತಾಡಿದ. 'ಸ್ವಾಮೀ ಇವರೆಲ್ಲಾ ಹೇಳೋದು ನಿಜ. ಕುಡಿದಾಗ ತಲೆ ಕೆಟ್ಟ ಹೇಗ್ಹೇಗೋ ಆಡ್ತೀನಿ. ನಾನು ಮಾಡುವ ಎಲ್ಲಾ ಅನಾಚಾರವನ್ನು ಸಹಿಸಿಕೊಂಡು ಸಹನೆಯಿಂದ ಇವಳನ್ನು ಕಂಡರೆ ನನಗೆ ಹುಚ್ಚು ಕೋಪ ಬರ್ತಿತ್ತು. ಅದಕ್ಕಾಗಿ ಎಷ್ಟೋ ಚುಚ್ಚು ಮಾತುಗಳನ್ನಾಡಿದೆ. ಇವಳು ಸ್ಥೈರಣೆ ಕಳೆದುಕೊಳ್ಳಲಿಲ್ಲ. ಹೇಗಾದರೂ ಇವಳನ್ನು ನೋಯಿಸಬೇಕೆಂದು ಇವಳನ್ನು ವಾರಾಂಗನೆ ಎಂದು ಜರಿದೆ. ಹಾಗಾಗಿ ತಪ್ಪೆಲ್ಲಾ ನಂದೆ...'

ಅಗಸನ ಹೆಂಡತಿ ಹೇಳಿದಳು. 'ದೊರೆಯೇ, ಇವನೆಂಥವನಾದರೂ ನನ್ನ ಗಂಡ. ನಾನವನನ್ನು ಸಂಭಾಳಿಸುತ್ತೇನೆ. ಆದರೆ ನೀತಿವಂತೆಯಾದ ಹೆಂಗಸಿಗೆ ಮರ್ಮ ಭೇದಕ ಬೈಗುಳವೆಂದರೆ ವಾರಾಂಗನೆ ಎನ್ನಿಸಿಕೊಳ್ಳುವುದು. ಆ ಒಂದು ಮಾತಿನಿಂದ ನೊಂದು ನಾನು ಇವನಿಗೆ ಹೇಳದೆ ತೌರಿಗೆ ಹೋದದ್ದು ನಿಜ...'

ಮುಂದೆ ಅಗಸ. 'ಸ್ವಾಮೀ, ಇನ್ನು ಮೇಲೆ ಸರಿಯಾಗಿರ್ತೀನಿ. ಬೈಗುಳದ ಮಧ್ಯೆ ತಮ್ಮ ಹೆಸರನ್ನು ಬಳಸಿದ್ದು ಮಹಾ ತಪ್ಪು. ಅದಕ್ಕೆ ಶಿಕ್ಷೆ ಕೊಡಿ...' ಎಲ್ಲವನ್ನೂ ಕೇಳಿದ ರಾಮ 'ಸಭಾ ಪ್ರಮುಖರೇ, ಈಗ ನೀವೇನು ಹೇಳುವಿರಿ?' ಎಂದ. ಅದಕ್ಕವರು 'ರಾಮಾ ನಿಂದೇ ತೀರ್ಮಾನ' ಎಂದರು. ಅದಕ್ಕೆ ರಾಮ ಈ ಅಗಸನಿಗೆ 10 ಕೊರಡೇ ಪೆಟ್ಟು ಕೊಟ್ಟು ಕಳಿಸಿಬಿಡಿ. ಈ ಹೆಣ್ಣು ಮಗುವಿಗೆ ಒಂದಿಷ್ಟು ದನಕರುಗಳನ್ನೂ, ಹಣ, ಆಭರಣಗಳನ್ನೂ ಕೊಟ್ಟು ಕಳಿಸಿ ಎಂದು ತೀರ್ಮಾನ ಹೇಳಿದ. 'ಸರಿ ನಾನು ಸೀತೆಯೊಡನೆ ಸಿಂಹಾಸನ ತ್ಯಾಗ ಮಾಡುತ್ತಿದ್ದೇನೆ' ಎಂದು ಘೋಷಿಸಿದ. ಸರ್ವರೂ 'ಬೇಡ ಬೇಡ' ಎಂದು ಅಂಗಲಾಚಿದರು.

ಎಲ್ಲರನ್ನು ಸುಮ್ಮನಿರಿಸಿದ ಪುರ ಪ್ರಮುಖರು ಎದ್ದು ನಿಂತು 'ರಾಮ ರಾಜರೇ ನೀವೀಗ ಮಡದಿಯನ್ನು ತ್ಯಜಿಸಿದರೂ, ಅಥವಾ ನೀವೇ ಸಿಂಹಾಸನವನ್ನು ತ್ಯಜಿಸಿದರೂ ಸೀತಮ್ಮ ತಪ್ಪು ಮಾಡಿದ್ದಾರೆ ಎಂದು ಒಪ್ಪಿಕೊಂಡಂತಾಗುತ್ತೆ. ದಯವಿಟ್ಟು ಈ ವಿಚಾರವನ್ನು ಇಲ್ಲೇ ಬಿಟ್ಟು ಈಗಿನಂತೆಯೇ ಮುಂದುವರೆದು ನಮ್ಮನ್ನೆಲ್ಲಾ ಸಲಹಿ' ಎಂದು ಕೇಳಿಕೊಂಡ.

'ಎಲ್ಲಾ ಕಡೆಯೂ ಅದೇ ಮಾತು. ಅದೇ ಕೋರಿಕೆ. ಕೊನೆಗೆ ಹಿರಿಯ ಸಭಾ ಮುಖ್ಯಸ್ಥರು 'ರಾಮರಾಜಾ, ತಪ್ಪಿಲ್ಲದ ಜಾನಕಿಯನ್ನು ಬಿಡುವುದು ಹೇಗೆ ತಪ್ಪೋ, ನೀನು ಸಿಂಹಾಸನವನ್ನು ಬಿಡುವುದೂ ಅಷ್ಟೇ ತಪ್ಪು. ಪ್ರಜಾಕೋಟಿಯ ಕೋರಿಕೆಗೆ ಬೆಲೆ ಕೊಡು. ಈಗಿನಂತೆಯೇ ಮುಂದುವರಿ' ಎಂದರು. 'ಆಗಲಿ' ಎಂದ ರಾಮ ಸಭೆಗೆ ತಲೆಬಾಗಿ ವಂದಿಸಿದ. ಎಲ್ಲರ ಜೈಕಾರದ ಮಧ್ಯದಲ್ಲಿ ದಾಸಿಯೊಬ್ಬಳು ಓಡಿ ಬಂದು 'ಮಹಾರಾಜರೇ ಮಹಾರಾಣಿ ಅವಳಿ ಮಕ್ಕಳಿಗೆ ಜನ್ಮ ನೀಡಿದ್ದಾರೆ' ಎಂದು ಉಸುರಿದಳು. ರಾಮನು ತಮ್ಮ ಕೊರಳಲ್ಲಿದ್ದ ಚಿನ್ನದ ಹಾರವನ್ನು ಶುಭ ವಾರ್ತೆ ತಂದಿದ್ದ ದಾಸಿಗೆ ನೀಡಿ, ಸಭೆಯನ್ನು ಬರ್ಖಾಸ್ತು ಮಾಡಿ, ಸೀತೆಯ ಅಂತಃಪುರಕ್ಕೆ ಧಾವಿಸಿದರು.

'ಮುಂದಿನ ರಾಮರಾಜ್ಯಕ್ಕೆ ಉಪಮಾನವಿಲ್ಲ. ರಾಮರಾಜ್ಯಕ್ಕೆ ರಾಮರಾಜ್ಯವೇ ಸಾಟಿ' ಇಷ್ಟನ್ನು ಹೇಳಿದ ಶಾಸ್ತ್ರಿಗಳು 'ರಾಮಾಯಣ ಹೀಗೇಕೆ ನಡೆದಿರಬಾರದು'? ಎಂದರು. ನಾನು ರಾಮನ ಉದಾರ ಮನೋಭಾವ, ಸದ್ಗುಣಗಳ ಸರೋವರದಲ್ಲಿ ತೇಲುತ್ತಿದ್ದೆ. ಅಲ್ಲದೆ ತ್ರೇತಾಯುಗದ ರಾಮರಾಜ್ಯದ ಆದರ್ಶ ಈ ಕಲಿಯುಗದಲ್ಲೂ ನಮ್ಮನ್ನು ಆಕರ್ಷಿಸುತ್ತಿದೆ ಅಲ್ಲವೆ?

ಪುನಃ ಶಾಸ್ತ್ರಿಗಳೇ, 'ನೀನು ಕೇಳಿದ ಮೊದಲನೇ ಪ್ರಶ್ನೆಗೆ ಇನ್ನೊಂದು ಉತ್ತರವಿದ ಕೇಳು' ಎಂದು 'ಶಿವ ಗಂಗೆಯನ್ನು ಮದುವೆಯಾಗಲೇ ಇಲ್ಲ. ಅವನಿಗೆ ಗೌರಿಯೊಬ್ಬಳೇ ಪತ್ನಿ. ಗಂಗೆ ದೇವಲೋಕದಿಂದ ಭೂಮಿಗೆ ಬಂದಾಗ ಅವಳಿಗೆ ಶಿವ ತನ್ನ ತಲೆಯಲ್ಲಿ ಆಶ್ರಯ ಕೊಟ್ಟ ಅಷ್ಟೇ; ಇದನ್ನು ನಂಗೆ ಇನ್ನೊಬ್ಬ ವಿದ್ವಾಂಸರು ಹೇಳಿದರು ಅಮ್ಮಾ' ಎಂದರು. ಕತ್ತಲಾಗುತ್ತಿತ್ತು. 'ಹೊರಡುತ್ತೇನೆ' ಎಂದ ಅವರನ್ನು ನಾವಿಬ್ಬರೂ ಬಿಡದೆ ನಮ್ಮಲ್ಲೇ ಉಳಿಸಿಕೊಂಡೆವು.